FAX: 91-080-3330277
E-mail comptrolleruasb@gmail.com

GKVK: 23330153 – 225
23332285

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು –560065

ಸಂಖ್ಯೆ. ಹ.ನಿ.ಅ/ವಿಭಾಗ – 2/ವೈದ್ಯಕೀಯ ವೆಚ್ಚ/2024-25 ದಿನಾಂಕ: 11.07.2024

## ಸುತ್ತೋಲೆ ಸಂಖ್ಯೆ : 08

ವಿಷಯ: ವೈದ್ಯಕೀಯ ವೆಚ್ಚ ಮರುಪಾವತಿ ಸಂಭಂದಿಸಿದ ದಾಖಲಾತಿಗಳನ್ನು ಲಗತ್ತಿಸುವ ಮತ್ತು ನಮೂದಿಸುವ ಬಗ್ಗೆ

ಉಲ್ಲೇಖ:
1. ಸಂಖ್ಯೆ: ಹ.ನಿ.ಅ/ವಿಭಾಗ-2/ವೈದ್ಯಕೀಯ ವೆಚ್ಚ/2024-25
2. ಸರ್ಕಾರಿ ಲೆಕ್ಕ ಪರಿಶೋಧಕರ 2021-22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ
3. ಸಂಖ್ಯೆ , ಡಿ.ಪಿ.ಎ.ಆರ್. 2 ಎಸ್. ಎಂ. ಆರ್. 2008 ದಿನಾಂಕ 24.10.2009
4. ಸರ್ಕಾರಿ ಆದೇಶ ಸಂಖ್ಯೆ. ಸಿ. ಆ.ಸು.ಇ-48 ಸೇ.ನಿ.ಎಫ್ 2014, ಬೆಂಗಳೂರು ದಿ: 14.03.2018
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08.07.2024

*****

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸಿಬ್ಬಂದಿ ವರ್ಗ ಮತ್ತು ಅವರ ಅವಲಂಬಿತರ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು C.G.H.S ದರಗಳ ಅನ್ವಯ ಮರುಪಾವತಿಗಾಗಿ ಸಲ್ಲಿಸುವ ಬಿಲ್ಲುಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪೂರೈಸಿ ಸಲ್ಲಿಸತಕ್ಕದ್ದು.

1. ಸರ್ಕಾರಿ ನೌಕರರು ಮತ್ತು ಅವರ ಕುಟುಂಬ ಸದಸ್ಯರು ಒಳ ರೋಗಿಯಾಗಿ ಸರ್ಕಾರದಿಂದ ಮಾನ್ಯತೆ ಪಡೆದ ಹಾಗೂ ತುರ್ತು ಚಿಕಿತ್ಸೆಗಾಗಿ ಮಾನ್ಯತೆ ಪಡಯದ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ವಿಶ್ವವಿದ್ಯಾನಿಲಯದ ಅನುಮತಿ ಪಡೆದ ನಂತರ ಉಲ್ಲೇಖ (3) ರ ಪ್ಯಾಕೇಜ್ ದರಗಳ ಅನ್ವಯ ಮರುಪಾವತಿ ಮಾಡಲಾಗುವುದು.
2. ಸರ್ಕಾರಿ ನೌಕರರು ಮತ್ತು ಅವರ ಕುಟುಂಬ ಸದಸ್ಯರು ಹೊರ ರೋಗಿಯಾಗಿ ಸರ್ಕಾರಿ ಮತ್ತು ಸರ್ಕಾರ ದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ವೈದ್ಯಕೀಯ ವೆಚ್ಚವನ್ನು ಉಲ್ಲೇಖ (4) ರ ಪ್ರಕಾರ ದೀರ್ಘಾವದಿ ಚಿಕಿತ್ಸೆಯ ಕಾಯಿಲೆಗಳಿಗೆ ಮಾತ್ರ ಮರುಪಾವತಿ ಮಾಡಲಾಗುವುದು.
3. ಎಲ್ಲಾ ವೈದ್ಯಕೀಯ ವೆಚ್ಚದ ಬಿಲ್ಲುಗಳಿಗೆ ನಿಯಂತ್ರಣಾಧಿಕಾರಿಗಳ ಮಂಜೂರಾತಿ ಆದೇಶವನ್ನು ಹೊಂದಿರಬೇಕು.
4. ಅಸಲಿ ವೈದ್ಯಕೀಯ ಬಿಲ್ಲು ಹಾಗೂ ಒಳರೋಗಿಯ ಪ್ರಮಾಣ ಪತ್ರ (Discharge summary) ಲಗತ್ತಿಸುವುದು
5. ಫಾರಂ ನಂ. "ಸಿ" ನ ಎಲ್ಲಾ ಕಾಲಂಗಳನ್ನು ಸಂಪೂರ್ಣವಾಗಿ ತುಂಬುವುದು
6. ಫಾರಂ ಸಂ 'ಸಿ'ನಲ್ಲಿ ರೋಗಿಯ ಕಾಯಿಲೆಯ ಹೆಸರಿನ ಬಗ್ಗೆ ಸಂಪೂರ್ಣವಾಗಿ ವಿವರಿಸುವುದು
7. ಅವಲಂಬಿತರ ತಂದೆ ತಾಯಿಯ ಆದಾಯ ದೃಢೀಕರಣ ಪತ್ರವನ್ನು ಲಗತ್ತಿಸುವುದು
8. ಫಾರಂ ನಂ. 'ಸಿ'ನಲ್ಲಿ Vide Rule (15) ಅಗತ್ಯತೆಯ ಪ್ರಮಾಣ ಪತ್ರವನ್ನು ಸಂಪೂರ್ಣವಾಗಿ ತುಂಬುವುದು

ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ವೈದ್ಯಕೀಯ ಚಿಕಿತ್ಸಾ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ತಯಾರಿಸುವಾಗ ಈ ಮೇಲಿನ ಅಂಶಗಳನ್ನು ಪರಿಗಣಿಸಿ (ಗಮನಿಸಿ) ಬಿಲ್ಲುಗಳನ್ನು ಮರುಪಾವತಿಗೆ ಕಛೇರಿಗೆ ಸಲ್ಲಿಸಲು ಕೋರಿದೆ.

ಹಣಕಾಸು ನಿಯಂತ್ರಣಾಧಿಕಾರಿಗಳು

ಪ್ರತಿ:

1. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳ ಮಾಹಿತಿಗಾಗಿ ಮತ್ತು ವೈದ್ಯಕೀಯ ವೆಚ್ಚದ ಪರುಪಾವತಿಯ ಬಿಲ್ಲುಗಳನ್ನು ಸಲ್ಲಿಸುವಾಗ ಸದರಿ ವಿಷಯವನ್ನು ಪರಿಶೀಲಿಸಿ ಸಲ್ಲಿಸಲು ಸೂಚಿಸಿದೆ
3. ಎಲ್ಲಾ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು / ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು
4. ಎಲ್ಲಾ ಯೋಜನ ಮುಖ್ಯಸ್ಥರು / ಎಲ್ಲಾ ವಿಭಾಗಗಳ ಮುಖ್ಯಸ್ಥರು
5. ಕಛೇರಿ ಕಡತ